೨ ಸೇಡಂ ತಾಲ್ಲೂಕಿನ ರಾಜೇಶ್ವರಿ ಸಿಮೆಂಟ್ ಕಂಪನಿಯ ವಾಹನ ಚಾಲಕ ಅಫಜಲ್ ಎಂಬುವರು ಕೊಲೆಯಾಗಿರುವುದು

ಶ್ರೀ ಎಂ. ಚಂದ್ರಶೇಖರ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ಸೇಡಂ ತಾಲ್ಲೂಕಿನ ರಾಜೇಶ್ವರಿ ಸಿಮೆಂಟ್ ಕಂಪನಿಯ ವಾಹನ ಚಾಲಕ ಶ್ರೀ ಅಫಜಲ್ ಎಂಬುವರು ಕೊಲೆಯಾಗಿರುವ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಮಂತ್ರಿಯವರು).—ಸೇಡಂ ತಾಲ್ಲೂಕಿನ ರಾಜೇಶ್ವರಿ ಸಿಮೆಂಟ್ ಕಂಪನಿಯ ವಾಹನ ಚಾಲಕನಾಗಿದ್ದ ಕಾರ್ಮಿಕ ಶ್ರೀ ಅಫ್ಜಲ್ ಎಂಬುವರು ಕೊಲೆಯಾದ್ದರಿಂದ ಸಿಮೆಂಟ್ ಕಂಪನಿಯನ್ನು ಮುಚ್ಚಿರುವುದರಿಂದುಂಟಾದ ಗಂಭೀರ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಈ ಹೇಳಿಕೆಯನ್ನು ಹೇಳಬಯಸುತ್ತೇನೆ.

ಸೇಡಂ ತಾಲ್ಲೂಕಿನ ಮಲಖೇಡದಲ್ಲಿರುವ ರಾಜೇಶ್ವರಿ ಸಿಮೆಂಟ್ ಕಂಪನಿಯ ವಾಹನ ಚಾಲಕನಾಗಿದ್ದ ಕಾರ್ಮಿಕ ಶ್ರೀ ಅಫ್ಜಲ್ ಅವರ ಮೃತದೇಹ ಕಾರ್ಖಾನೆ ಆವರಣದ ಜಿಪ್ಸಂಯಾರ್ಡಿನಲ್ಲಿ ಪತ್ತೆಯಾಗಿದೆ. ಕಾರ್ಖಾನೆಗಳ ಅಧಿಕಾರಿಗಳು ದಿನಾಂಕ ೧೪-೮-೮೭, ೧೫-೮-೮೭ ಮತ್ತು ೧೬-೮-೮೭ ರಂದು ತನಿಖೆ ನಡೆಸಿರುತ್ತಾರೆ. ಸದರಿ ಕಾರ್ಮಿಕನು ದಿನಾಂಕ ೭-೮-೮೭ರಂದು ಕಾರ್ಖಾನೆಗೆ ೨ನೇ ಪಾಳಿಯಲ್ಲಿ ಕೆಲಸಮಾಡಿ ತದನಂತರ ೩ನೇ ಪಾಳಿಯಲ್ಲಿ ಹೆಚ್ಚುನ ವೇಳೆ ಕೆಲಸಮಾಡಿರುತ್ತಾರೆ. ಅವರು ಕಾರ್ಖಾನೆಯ ಹೊರಗೆ ಹೋಗಿರುವುದಕ್ಕೆ ಯಾವ ಮಾಹಿತಿ ಇರುವುದಿಲ್ಲ. ಅವರ ದೇಹವು ಜಿಪ್ಸಂ ಯಾರ್ಡ್‌ನಲ್ಲಿ ಜಿಪ್ಸಂ ಮಧ್ಯೆ ಒಂದೂವರೆ ಅಡಿ ಆಳದಲ್ಲಿ ಇದ್ದು ಅವನ್ನು ದಿನಾಂಕ ೧೦-೮-೮೭ ರಂದು ಕಾರ್ಖಾನೆಯಲ್ಲಿ ಕಾರ್ಮಿಕರು ಪತ್ತೆ ಮಾಡಿರುತ್ತಾರೆ. ಈ ವಿಷಯು ಸಾರ್ವಜನಿಕರಿಗೆ ಗೊತ್ತಾಗಿ, ಸಾರ್ವಜನಿಕರು ಕಾರ್ಖಾನೆಗೆ ನುಗ್ಗಿ ಕೆಲಸಗಾರರೊಂದಿಗೆ ಕೂಡಿದಾಗ ಅಹಿತಕರ ಘಟನೆಗಳು ನಡೆದಿವೆ ಎಂದು ಗೊತ್ತಾಗಿದೆ. ಆಂದಿನಿಂದ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಆಡಳಿತದವರು ೧೫ ಜನ ಕಾರ್ಮಿಕರ ಮೇಲೆ ಫಿರ್ಯಾದು ಸಲ್ಲಿಸಿದ್ದು ಅವರ ಮೇಲೆ ಪೊಲೀಸ್ ಇಲಾಖೆಯವರು ಕ್ರಿಮಿನಲ್ ಖಟ್ಲೆ ಹೂಡಿದ್ದಾರೆಂತಲೂ ಅದನ್ನು ವಾಪಸ್ಸು ತೆಗೆದುಕೊಳ್ಳಬೆ ಕೆಂದೂ ಯಾವ ಕ್ರಮ ತೆಗೆದುಕೊಳ್ಳಬಾರದೆಂದು ಕಾರ್ಮಿಕರು ಕೆಳುತ್ತಿದ್ದಾರೆ. ಆಡಳಿತದವರ ಪ್ರಕಾರ ಈ ವಿಷಯು ಪೋಲೀಸ್ ಇಲಾಖೆಗೆ ಸಂಬಂಧಿಸಿದ್ದುದರಿಂದ ಫಿರ್ಯಾದು ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂಬ ನಿಲುವು ತಳೆದಿದ್ದಾರೆ. ಕಾರ್ಖಾನೆಯು ತೆರೆದಿದ್ದು ಕೆಲಸಗಾರರು ಯಾವಾಗಲೂ ಹಾಜರಾಗಬಹುದೆಂದು, ಶಿಸ್ತಿನ ಕ್ರಮ ತೆಗೆದುಕೊಳ್ಳುವುದು ಆಡಳಿತ ವರ್ಗಕ್ಕೆ ಸೇರಿದ್ದು ಎಂದೂ ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಗುಲ್ಬರ್ಗಾದ ಡೆಪ್ಯೂಟಿ ಲೇಬರ್ ಕಮಿಷನರವರು ಮಧ್ಯೆ ಪ್ರವೇಶಿಸಿ ಸಂಧಾನ ನಡೆಸುತ್ತಿದ್ದಾರೆ. ಇತ್ತೀಚಿನ ಸಭೆಗಳು ದಿನಾಂಕ ೧೭-೮-೮೭, ೧೯-೮-೮೭ ಮತ್ತು ೨೨-೮-೮೭ ರಂದು ನಡೆದಿದೆ. ರಾಜಶ್ರೀ ಸಿಮೆಂಟ್ ಕಾರ್ಖಾನೆಯಲ್ಲಿ ಒಟ್ಟು ೪೧೦ ಜನ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ ಎಂದೂ ವರದಿಯಾಗಿದೆ.

ಶ್ರೀ ಎಂ. ಚಂದ್ರಶೇಖರ ರೆಡ್ಡಿ.—ಈ ಘಟನೆಯಲ್ಲಿ ಹಲ್ಲೆ ಮಾಡಿದರು ಎಂದು ೧೫ ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ತಾವು ಮಧ್ಯಸ್ಥಿಕೆ ವಹಿಸಿ ಅಧಿಕಾರಿಗಳನ್ನು ಕರೆಯಿಸಿ ಮತ್ತೆ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ವಿಚಾರ ಮಾಡಬೇಕು.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಸ್ಟ್ರೈಕಾಗಿ ೨೭ ದಿವಸವಾಯಿತು. ಸಣ್ಣ ಘಟನೆಯಲ್ಲಿ ಇಡು ಏನು ನಡೆಯಿತೆಂದು ತಪ್ಪು ಗಮನಕ್ಕೆ ತರುತ್ತೇನೆ. ಒಬ್ಬ ಮನುಷ್ಯ ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದವನು ೩ನೇ ತಾರೀಖು ಫ್ಯಾಕ್ಟರಿಗೆ ಹೋದ ತಕ್ಷಣ ಪಂಚ್ ಮಾಡಿದ. ಅವನ ಸೆಕೆಂಡ್ ಶಿಫ್ಟ್ ೧೦ ಗಂಟೆಗೆ ಮುಗಿಯುತ್ತದೆ. ಮ್ಯಾನೆ ಜ್‌ಮೆಂಟಿನವರು ೩ನೇ ಶಿಫ್ಟಿನಲ್ಲೂ ಓವರ್‌ಟೈಂ ಮಾಡಬೇಕೆಂದು ಹೇಳುತ್ತಾರೆ. ಅವನು ಓ.ಟಿ. ಮಾಡಿದ. ಆಮೇಲೆ ಅವನು ಫ್ಯಾಕ್ಟರಿಯಿಂದ ಹೊರಗೆ ಹೋದದ್ದನ್ನು ಯಾರೂ ಕಾಣಲಿಲ್ಲ. ಮೂರು ದಿವಸ ಆದ ಮೇಲೆ ಜಿಪ್ಸಂಯಾರ್ಡಿನಲ್ಲಿ ಬ್ಯಾಡ್‌ಸ್ಮೆಲ್ ಬರತೊಡಗಿತು. ಅದನ್ನು ಅಲ್ಲಿದ್ದ ಮ್ಯಾನೇಜರ್‌ಗೆ ಕಾರ್ಮಿಕರು ಹೇಳಿದಾಗ ಅವನು ಯಾವುದೋ ನಾಯಿ ಸತ್ತು ಬಿದ್ದಿರಬೇಕು, ತೆಗೆಸಿ ಆಚೆಗೆ ಒಗೆಯಿರಿ ಎಂದು ಹೇಳಿದ. ಇದರ ನಂತರ ಆ ವಾಸನೆ ಅಫಜಲ್ ಎನ್ನುವ ಕಾರ್ಮಿಕನ ಕೊಳೆತ ದೇಹದ್ದು ಎಂದು ಗೊತ್ತಾದ ಮೇಲೆ ಕಾರ್ಮಿಕರು ಮತ್ತು ಸುತ್ತಲಿನ ಹಳ್ಳಿಗಳ ಜನರು ಒಬ್ಬ ಕಾರ್ಮಿಕನನ್ನು ನಾಯಿ ಎಂದು ಕರೆದು ಬಿಹೆವ್ ಮಾಡಿದ್ದಕ್ಕೆ ಪ್ರತಿಭಟಿಸಿದರು. ಅಂದಿನಿಂದ ಇಂದಿನವರೆಗೂ ಫ್ಯಾಕ್ಟರಿ ಸ್ಟ್ರೈಕಾಗಿದೆ. ಕಾರ್ಮಿಕ ಮಂತ್ರಿಗಳು ಕೂಡ ವಿಸಿಟ್ ಮಾಡಿದರು. ಜೊತೆಗೆ ೧೫ ಜನರನ್ನು ಧಾಳಿ